**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಸದುರ್ಗ.**

**ಕ್ರಿಮಿನಲ್ ಮೊಕದ್ದಮೆ ಸಂಖ್ಯೆ:1380/2021**

**ಪಿಡಬ್ಲ್ಯೂ-2**
**ಸಿಡಬ್ಲ್ಯೂ-2**

**ಸಾಕ್ಷಿಗೆ ದಿನಾಂಕ 07-02-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.**

| | |
|---|---|
| ಸಾಕ್ಷಿಯ ಹೆಸರು | ಃ ಜೀವನ್ ಕುಮಾರ್ ಬಿ.ಆರ್ |
| ತಂದೆಯ ಹೆಸರು | ಃ ರಾಮಚಂದ್ರಪ್ಪ |
| ವಯಸ್ಸು | ಃ 25 ವರ್ಷ |
| ಉದ್ಯೋಗ | ಃ ಖಾಸಗಿ ಉದ್ಯೋಗ |
| ವಾಸಸ್ಥಳ | ಃ ಬೋಕಿಕೆರೆ |

<u>ಮುಖ್ಯವಿಚಾರಣೆ ಮಾನ್ಯ ಸ.ಸ.ಅ ರವರಿಂದ</u>

ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿಯನ್ನು ನಾನು ಈ ಮೊದಲು ಅಬಕಾರಿ ದಾಳಿ ಸಮಯದಲ್ಲಿ ನೋಡಿರುತ್ತೇನೆ.

ದಿಃ 25-05-2021 ರಂದು ನಾನು ಲಕ್ಷ್ಮೀದೇವರಹಳ್ಳಿ ಗ್ರಾಮದ ತಿರುವಿನಲ್ಲಿ ನಾನು ಮತ್ತು ಚಾ.ಸಾ-3 ನಿಂತಿದ್ದಾಗ ಅಬಕಾರಿ ಪೊಲೀಸರು ಬಂದು ನಮ್ಮನ್ನು ನಾಗಭೂಷಣ್ ಎಂಬುವರ ಮನೆಗೆ ಕರೆದುಕೊಂಡು ಹೋಗಿ ಮನೆಯ ಮೇಲೆ ದಾಳಿ ಮಾಡಿ ಮದ್ಯವನ್ನು ವಶಪಡಿಸಿಕೊಂಡಿರುತ್ತಾರೆ. ಜೀಪನ್ನು ನೋಡಿ ಆರೋಪಿಯು ಓಡಿಹೋಗಿರುತ್ತಾರೆ. ಎಷ್ಟು ಮದ್ಯ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಮನೆಯಲ್ಲಿ ಒಬ್ಬ ಮಹಿಳೆ ಇದ್ದು ಆಕೆ ನಾಗಭೂಷಣ್ ರವರ ಪತ್ನಿ ಎಂದು ತಿಳಿಸಿದ್ದು ಆಕೆಯ ಹೆಸರು ಗೊತ್ತಿಲ್ಲ. ದೊರೆತ ಮದ್ಯದ ಪ್ಯಾಕುಗಳು ಯಾವ ಕಂಪನಿ ಎಂದು ಗೊತ್ತಿಲ್ಲ ಆದರೆ ರಾಜಾ ಎಂದು ಬರೆದಿತ್ತು. ನಂತರ ಅವುಗಳನ್ನು ಒಂದು ಚೀಲದಲ್ಲಿ ಪೊಲೀಸರು ವಶಪಡಿಸಿಕೊಂಡರು. ನಾವು ಆರೋಪಿಯ ಮನೆಗೆ ಹೋದಾಗ ಸಮಯ ಬೆಳಗ್ಗೆ 10-15 ಆಗಿತ್ತು. ಪೊಲೀಸರು ಸ್ಥಳದಲ್ಲಿ ಮಹಜರ್ ಬರೆದಿದ್ದು ನಾನು ಮತ್ತು ಚಾ.ಸಾ-3 ಸಹಿಗಳನ್ನು ಆರೋಪಿಯ ಮನೆಯಲ್ಲಿ ಮಾಡಿರುತ್ತೇವೆ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಆ ದಿನ ವಶಪಡಿಸಿಕೊಂಡ ಸ್ವತ್ತುಗಳನ್ನು ನೋಡಿದರೆ ಗುರುತಿಸುತ್ತೇನೆ. ಆ ದಿನ ನಮ್ಮನ್ನು ನೋಡಿ ಓಡಿಹೋದ

ವ್ಯಕ್ತಿಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ವ್ಯಕ್ತಿ ನ್ಯಾಯಾಲಯದಲ್ಲಿ ಈ ದಿನ ಹಾಜರಿರುವ ವ್ಯಕ್ತಿ ಎಂದು ಸಾಕ್ಷಿಯು ಗುರುತಿಸುತ್ತಾರೆ. ಆ ದಿನ ಅಬಕಾರಿ ಪೊಲೀಸರು ವಶಪಡಿಸಿಕೊಂಡು ರಾಸಾಯನಿಕ ಪರೀಕ್ಷೆಗೆ ಕಳುಹಿಸಿದ ಟೆಟ್ರಾ ಪ್ಯಾಕುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಸದರಿ ಟೆಟ್ರಾ ಪ್ಯಾಕುಗಳನ್ನು ಗುರುತಿಸಿದ್ದು, ಅವುಗಳನ್ನು ಈಗಾಗಲೇ ಮು.ಮಾ-1 ಮತ್ತು 2 ಎಂದು ಗುರುತಿಸಲಾಗಿದೆ.

ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ಇರುವ ಸಹಿ ನನ್ನದಾಗಿರುತ್ತದೆ. **ಸದರಿ ದಾಖಲಾತಿಯು ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದು ಈಗಾಗಲೇ ನಿಪಿ-1 ಎಂದು ಗುರುತಿಸಲಾಗಿದ್ದು, ಅದರಲ್ಲಿನ ಸಾಕ್ಷಿಯ ಸಹಿಯನ್ನು ನಿಪಿ-1(ಬಿ)ಎಂದು ಗುರುತಿಸಲಾಯಿತು. ಸಾಕ್ಷಿಯು ಅನುಬಂಧವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-4 ಎಂದು, ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಚೀಟಿಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-5 ಎಂದು, ಸಾಕ್ಷಿಯ ಸಹಿಯನ್ನು ನಿಪಿ-5(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಾದರಿ ಸೀಲಿನ ನಕಲನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ವಿಚಾರಣೆಗೆ ಹಾಜರಾಗಲು ನೀಡಿದ ನೋಟೀಸನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-7 ಎಂದು, ಸಾಕ್ಷಿಯ ಸಹಿಯನ್ನು ನಿಪಿ-7(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಶೋಧನಾ ಸಮುಚಿತ ಆಧಾರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-8 ಎಂದು, ಸಾಕ್ಷಿಯ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು.**

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು)**

<u>ಪಾಟೀ ಸವಾಲು ಮಾನ್ಯ ಸ.ಸ.ಅ.ರವರಿಂದ</u>

ನಾವು ದಾಳಿಗೆ ಹೋದಾಗ ಮನೆಯ ಒಳಗಿನ ಅಡುಗೆ ಮನೆಯಲ್ಲಿ ಬಿಳಿ ಚೀಲ

ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮನೆಯ ಹೊರಗೆ ತಂದಿದ್ದರು ಎಂದು ನುಡಿಯುತ್ತಾರೆ. ದೊರೆತ ಸ್ವತ್ತುಗಳಲ್ಲಿ 90 ಎಂ.ಎಲ್ ನ 47 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕುಗಳು ಹಾಗೂ 180 ಎಂ.ಎಲ್ ನ 3 ಒ.ಟಿ ವಿಸ್ಕಿ ಟೆಟ್ರಾ ಪ್ಯಾಕುಗಳು ಇದ್ದವು ಎಂದರೆ ನನಗೆ ಗೊತ್ತಿಲ್ಲ. ಅವುಗಳ ಪೈಕಿ ರಾಸಾಯನಿಕ ಪರೀಕ್ಷೆಗಾಗಿ 90 ಎಂ.ಎಲ್ ನ 24 ರಾಜಾ ವಿಸ್ಕಿಯ ಟೆಟ್ರಾ ಪ್ಯಾಕುಗಳು ಹಾಗೂ 180 ಎಂ.ಎಲ್ ನ 3 ಒ.ಟಿ ವಿಸ್ಕಿ ಟೆಟ್ರಾ ಪ್ಯಾಕುಗಳನ್ನು ಪ್ರತ್ಯೇಕವಾಗಿ ತೆಗೆದು ಸೀಲು ಕ್ರಮ ಜರುಗಿಸಿದರು ಎಂದರೆ ಸರಿ. ಮಹಜರನ್ನು ಬೆಳಗ್ಗೆ 10-50 ರಿಂದ 11-50 ರವರಗೆ ಬರೆದಿರುತ್ತಾರೆ ಎಂದರೆ ಸರಿ. ಇದಕ್ಕೆ ಸಂಬಂಧಿಸಿದಂತೆ ನಾನು ದಿಃ27-08-2021 ರಂದು ನಾನು ಅಬಕಾರಿ ಪೊಲೀಸ್ ಠಾಣೆಯಲ್ಲಿ ಹೇಳಿಕೆಯನ್ನು ನೀಡಿರುತ್ತೇನೆ.

<u>ಪಾಟೀ ಸವಾಲು ಆರೋಪಿ ಪರ ಶ್ರೀ ಎಸ್.ಎಂ ವಕೀಲರಿಂದ</u>

1. ನಾನು ಬೆಂಗಳೂರಿನ ಬಯೋಕಾನ್ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನಾನು ಕಂಚೀಪುರ ಗ್ರಾಮದಲ್ಲಿ ಒಂದು ಸಮಾರಂಭಕ್ಕೆ ಹಾಜರಾಗಲು ಬಂದಿದ್ದೆನು. ಆ ದಿನ ಯಾವ ವಾರ ಎಂದು ನನಗೆ ಗೊತ್ತಿಲ್ಲ. ಕಂಚೀದೇವರ ಬೆಟ್ಟದಲ್ಲಿ ಶನಿವಾರ ಮಾತ್ರ ಪೂಜೆ ನಡೆಯುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಕಂಚೀದೇವರ ಬೆಟ್ಟದಿಂದ ಲಕ್ಷ್ಮೀದೇವರಹಳ್ಳಿ, ಅಲ್ಲಿಂದ ಕಿಟ್ಟದಾಳ್ ಮತ್ತು ಅಲ್ಲಿಂದ ಕಂಚೀಪುರ ಗ್ರಾಮಕ್ಕೆ ಹೋದೆನು. ಕಂಚೀಪುರ ಸರ್ಕಲ್ ನಿಂದ ಬಲಭಾಗಕ್ಕೆ ತಿರುಗಿ ಕಂಚೀದೇವರ ಬೆಟ್ಟಕ್ಕೆ ಹೋದೆವು. ಮಧ್ಯದಲ್ಲಿ ಯಾವ ಯಾವ ಗ್ರಾಮಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ನಾನು ಕಂಚೀಪುರ ಗ್ರಾಮಕ್ಕೆ ನೇರವಾಗಿ ಹೋಗಬಹುದಾಗಿದ್ದರು ಮತ್ತೋಡು ಗ್ರಾಮದಿಂದ ಸಮೀಪ ಆಗುತ್ತದೆ ಎಂದು ಆ ಮಾರ್ಗವಾಗಿ ಹೋಗಿದ್ದೆನು.

2. ಹೊಸದುರ್ಗದಿಂದ ಕಂಚೀಪುರಕ್ಕೆ 40 ಕಿ.ಮೀ. ಆಗುತ್ತದೆ. ಶ್ರೀರಾಂಪುರದ ಮಾರ್ಗದ ಮೂಲಕ ಕಂಚೀಪುರಕ್ಕೆ 5-10 ಕಿ.ಮೀ ಹೆಚ್ಚಾಗುತ್ತದೆ. ಮತ್ತೋಡು-ನೇರಲಕೆರೆ ಮೂಲಕ ಕಂಚೀದೇವರ ಬೆಟ್ಟಕ್ಕೆ ನೇರವಾಗಿ ಹೋಗಬಹುದು. ಹೊಸದುರ್ಗದಿಂದ ಕಂಚೀದೇವರ ಬೆಟ್ಟಕ್ಕೆ ನೇರವಾಗಿ 26 ಕಿ.ಮೀ. ದೂರ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ದೇವಸ್ಥಾನದಲ್ಲಿ ಸೇವೆಗಳು ಸಂಜೆ ಸಮಯದಲ್ಲಿ ಆಗುತ್ತದೆ ಎಂದರೆ ಸರಿ. ನಾನು ಹೊಸದುರ್ಗದಿಂದ ಹೊರಟಾಗ

ಸಮಯ 9 ಗಂಟೆ ಆಗಿತ್ತು. ನಾನು ಹೊಂಡಾ ಶೈನ್ ಬೈಕಿನಲ್ಲಿ ಹೋಗಿದ್ದು ಅದರ ನಂಬರು ನನಗೆ ಗೊತ್ತಿಲ್ಲ ಅದು ನನ್ನ ಬೈಕ್ ಅಲ್ಲ. ಬೈಕಿನಲ್ಲಿ ಪೆಟ್ರೋಲ್ ಲಕ್ಷ್ಮೀದೇವರಹಳ್ಳಿ ಗ್ರಾಮದ ತಿರುವಿನ 1 ಕಿ.ಮೀ. ಹಿಂದೆ ಖಾಲಿ ಆಗಿತ್ತು. ಅಂದರೆ ಗುಡ್ಡದನೇರಲಕೆರೆ ಗ್ರಾಮದಿಂದ ಸುಮಾರು 100-150 ಮೀ ಮುಂದೆ ಖಾಲಿ ಆಗಿತ್ತು. ಗುಡ್ಡದನೇರಲಕೆರೆ ಗ್ರಾಮದಲ್ಲಿ ಪೆಟ್ರೋಲ್ ಲಭ್ಯ ಇತ್ತು ಎಂದರೆ ಸರಿ. ನಾನು 2 ಕಿ.ಮೀ ಪೆಟ್ರೋಲ್‌ಗಾಗಿ ಗಾಡಿಯನ್ನು ತಳ್ಳಿಕೊಂಡು ಹೋಗಿರುತ್ತೇನೆ ಎಂದು ಪೊಲೀಸರ ಮಾತನ್ನು ಕೇಳಿಕೊಂಡು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಗುಡ್ಡದನೇರಲಕೆರೆ ಗ್ರಾಮದಿಂದ ನೇರವಾಗಿ ಲಕ್ಷ್ಮೀದೇವರಹಳ್ಳಿ ಗೇಟ್‌ಗೆ ಬಂದೆನು. ಯಾವ ದಿಕ್ಕಿನ ಹೋದೆ ಎಂದು ಗೊತ್ತಿಲ್ಲ. ಪೆಟ್ರೋಲ್ ಖಾಲಿ ಆದಾಗ ಸಮಯ 10 ಗಂಟೆ ಆಗಿತ್ತು. 1 ಕಿ.ಮೀ ಕಾಲ್ನಡಿಗೆಗೆ 15 ನಿಮಿಷ ಆಗುತ್ತದೆ. ಲಕ್ಷ್ಮೀದೇವರಹಳ್ಳಿ ಗೇಟ್ ಎಡಭಾಗಕ್ಕೆ ಬರುತ್ತದೆ. ಸದರಿ ಗೇಟ್ ನಲ್ಲಿ ಸುಮಾರು 15 ನಿಮಿಷ ನಿಂತಿದ್ದೆವು. ಸಾಕ್ಷಿ ಪುನಃ ಲಕ್ಷ್ಮೀದೇವರಹಳ್ಳಿ ಗೇಟ್ ಬಳಿ ಪೆಟ್ರೋಲ್ ಖಾಲಿ ಆಗಿದ್ದು ಆಗ ಸಮಯ 10 ಗಂಟೆ ಆಗಿತ್ತು ಎಂದು ನುಡಿಯುತ್ತಾರೆ.

3. ಪೊಲೀಸರು ನನಗೆ ಮಾತನಾಡಿಸಿ ಯಾವುದೇ ನೋಟೀಸು ನೀಡಿರುವುದಿಲ್ಲ. ನಾನು ಬೈಕ್ ಅಲ್ಲೇ ನಿಲ್ಲಿಸಿ ಜೀಪಿನಲ್ಲಿ ಹೋದೆವು. ಸ್ಥಳಕ್ಕೆ ಹೋಗುವವರೆಗೂ ಯಾರ ಮನೆಗೆ ಹೋಗುತ್ತಿದ್ದೇವೆ ಎಂದು ನನಗೆ ಗೊತ್ತಿರಲಿಲ್ಲ. ಮನೆಯ ಹತ್ತಿರ 7-8 ಜನರ ಗುಂಪು ಸೇರಿತ್ತು. ಸದರಿ 7-8 ಜನ ಜೀಪನ್ನು ನೋಡಿ ಓಡಿಹೋದರು. 8 ಜನ 8 ದಿಕ್ಕುಗಳಿಗೆ ಓಡಿಹೋದರು. ಆರೋಪಿಯು ಯಾವ ದಿಕ್ಕಿಗೆ ಓಡಿಹೋದರು ಎಂದು ನನಗೆ ಗೊತ್ತಿಲ್ಲ. ಆತನನ್ನು ಹಿಡಿಯಲು ನಾನು ಪ್ರಯತ್ನಿಸಿಲ್ಲ. ನಾನು ಜೀಪಿನ ಮಧ್ಯದಲ್ಲಿ ಕೂತಿದ್ದು, ಆರೋಪಿ ಮಾತ್ರ ಸ್ಪಷ್ಟವಾಗಿ ಕಂಡಿರುತ್ತಾರೆ.

**(ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ರೂ.200/- ಗಳ ಖರ್ಚಿನ ಮೇರೆಗೆ ಮುಂದೂಡಲಾಯಿತು).**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೆ.ಸರಿ ಅದೆ.**

**(ಪ್ರಸನ್ನಕುಮಾರ್ ಸಿ.)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಜೆ ಎಂ ಎಫ್ ಸಿ**

ನ್ಯಾಯಾಲಯ,ಹೊಸದುರ್ಗ.